# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1532 |
| ಮಾನ್ಯ ಸದಸ್ಯರ ಹೆಸರು | ಶ್ರೀ ಗೋವಿಂದ ರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 21-03-2025 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ<br>ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 05 ವರ್ಷದಿಂದ ಹಿಂದುಳಿದ ಇಲಾಖೆ ವತಿಯಿಂದ ಮೆಟ್ರಿಕ್ ನಂತರದ ಕೋರ್ಸು ವಿದ್ಯಾರ್ಥಿಗಳಿಗೆ ನೀಡಿರುವ ವಿದ್ಯಾರ್ಥಿವೇತನದ ಮೊತ್ತವೆಷ್ಟು | ಕಳೆದ 05 ವರ್ಷದಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ನಂತರದ ಕೋರ್ಸುಗಳ ವಿದ್ಯಾರ್ಥಿಗಳಿಗೆ ನೀಡಿರುವ ವಿದ್ಯಾರ್ಥಿ ವೇತನದ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಈ ಇಲಾಖೆಯಲ್ಲಿ ಅನುದಾನದ ಕೊರತೆಯಿಂದ ಕಳೆದ 04 ವರ್ಷಗಳಿಂದ ಸುಮಾರು 263.59 ಕೋಟಿ ರೂ. ವಿದ್ಯಾರ್ಥಿ ವೇತನವನ್ನು ಬಾಕಿ ಉಳಿಸಿಕೊಂಡಿರುವುದು ನಿಜವೇ | ಹಿಂದುಳಿದ ವರ್ಗಗಳ ಶುಲ್ಕ ಮರುಪಾವತಿ ಕಾರ್ಯಕ್ರಮದಡಿ 2020-21, 2021-22, 2022-23 ಮತ್ತು 2023-24ನೇ ಸಾಲಿಗೆ ಶುಲ್ಕ ಮರುಪಾವತಿ ಮಾಡಲು ಬಾಕಿ ಇರುವ ವಿದ್ಯಾರ್ಥಿಗಳಿಗೆ 2024-25ನೇ ಸಾಲಿನಲ್ಲಿ ಶುಲ್ಕ ಮರುಪಾವತಿ ಕಾರ್ಯಕ್ರಮದಡಿ ಬಿಡುಗಡೆಯಾಗಿರುವ ಅನುದಾನದಲ್ಲಿ ರೂ.263.59 ಕೋಟಿಗಳನ್ನು ಈ ವಿದ್ಯಾರ್ಥಿಗಳಿಗೆ ಪಾವತಿ ಮಾಡಲು ಆರ್ಥಿಕ ಇಲಾಖೆ ಸಹಮತಿ ನೀಡಿರುತ್ತದೆ.<br><br>ಅದರಂತೆ ಕಳೆದ 4 ಸಾಲುಗಳಲ್ಲಿ ಬಾಕಿಯಿರುವ ವಿದ್ಯಾರ್ಥಿಗಳಿಗೆ ರೂ.233.86 ಕೋಟಿಗಳನ್ನು ವಿನಿಯೋಗಿಸಿಕೊಂಡು ಶುಲ್ಕಮರುಪಾವತಿ ಪಾವತಿ ಮಾಡಲಾಗಿದ್ದು, ಈ ಕಾರ್ಯಕ್ರಮದಡಿ ವಿದ್ಯಾರ್ಥಿಗಳ ಆದಾರ್ ಲಿಂಕ್ ಆಗಿರುವ ಬ್ಯಾಂಕ್ ಖಾತೆಗೆ ನೇರವಾಗಿ ಶುಲ್ಕ ಮರುಪಾವತಿ ಜಮೆ ಮಾಡಲಾಗುತ್ತಿದ್ದು , ಆದಾರ್ ಸೀಡಿಂಗ್ ಮತ್ತು ಇತರೆ ಆದಾರ್ ಸಂಬಂದಿತ ತಾಂತ್ರಿಕ ಸಮಸ್ಯೆಗಳಿರುವ ವಿದ್ಯಾರ್ಥಿಗಳಿಗೆ ಪಾವತಿ ಪ್ರಕ್ರಿಯೆ ಇನ್ನೂ ಪ್ರಗತಿಯಲ್ಲಿರುತ್ತದೆ. |
| ಇ) | ಕಳೆದ 04 ವರ್ಷದಿಂದ ಇಲ್ಲಿಯವರೆಗೂ ವಿದ್ಯಾರ್ಥಿ ವೇತನಕ್ಕಾಗಿ ಬಂದತಹ ಅರ್ಜಿಗಳ ಸಂಖ್ಯೆ ಎಷ್ಟು; ಇದರಲ್ಲಿ ಅರ್ಹತೆವುಳ್ಳವರು ಹಾಗು ಅರ್ಹತೆ ಇಲ್ಲದವರ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ಒದಗಿಸುವುದು) | ಕಳೆದ 04 ವರ್ಷದಿಂದ ಇಲ್ಲಿಯವರೆಗೂ ವಿದ್ಯಾರ್ಥಿ ವೇತನಕ್ಕಾಗಿ ಬಂದಂತಹ ಅರ್ಜಿಗಳ ಸಂಖ್ಯೆ, ಇದರಲ್ಲಿ ಅರ್ಹತೆವುಳ್ಳವರು ಹಾಗೂ ಅರ್ಹತೆ ಇಲ್ಲದವರ ಸಂಖ್ಯೆಯ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |

…2..

| | | |
|---|---|---|
| ಈ) | ಅರ್ಹತೆವುಳ್ಳ ಎಲ್ಲಾ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿವೇತನ ನೀಡಲಾಗಿದೆಯೇ | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮಗಳು ಅನುದಾನದ ಮಿತಿಗೆ ಒಳಪಟ್ಟಿದ್ದು ಆರ್ಥಿಕ ವರ್ಷದಲ್ಲಿ ಬಿಡುಗಡೆಯಾಗುವ ಅನುದಾನದಲ್ಲಿ ಅರ್ಜಿ ಸಲ್ಲಿಸಿದ ಅರ್ಹ ವಿದ್ಯಾರ್ಥಿಗಳಿಗೆ ಅರ್ಹತೆ ಮತ್ತು ಅನುದಾನದ ಲಭ್ಯತೆಯನುಸಾರ ವಿದ್ಯಾರ್ಥಿವೇತನ ಪಾವತಿಸಲು ಕ್ರಮವಹಿಸಲಾಗುತ್ತಿರುತ್ತದೆ.<br><br>ಕಳೆದ 05 ವರ್ಷಗಳಲ್ಲಿ ವಿದ್ಯಾರ್ಥಿವೇತನ ಪಾವತಿಸಿರುವ ವಿವರಗಳನ್ನು **ಅನುಬಂಧ-1**ರಲ್ಲಿ ಲಗತ್ತಿಸಿದೆ. |
| ಉ) | ಮೆಟ್ರಿಕ್ ನಂತರದ ಕೋರ್ಸುಗಳ ವಿದ್ಯಾರ್ಥಿಗಳು ಯಾವ ಯಾವ ಯೋಜನೆಯಡಿ ಯಲ್ಲಿ ವಿದ್ಯಾರ್ಥಿ ವೇತನ ಪಡೆಯಲು ಅರ್ಹರಾಗಿರುತ್ತಾರೆ. | ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ಓದುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಶುಲ್ಕ ಮರುಪಾವತಿ ಕಾರ್ಯಕ್ರಮ, ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಈ ಎರಡು ಸೌಲಭ್ಯಗಳಲ್ಲಿ ಯಾವುದಾದರೂ ಒಂದು ಸೌಲಭ್ಯವನ್ನು ಮಾತ್ರ ಪಡೆಯಬಹುದಾಗಿರುತ್ತದೆ.<br><br>ಅಲೆಮಾರಿ / ಅರೆ-ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ಧನವನ್ನು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ಕಾರ್ಯಕ್ರಮದಡಿ ವಿತರಿಸಲಾಗುತ್ತಿರುತ್ತದೆ.<br><br>ವಸತಿ ನಿಲಯಗಳಲ್ಲಿ ಪ್ರವೇಶ ಸಿಗದಿರುವವರಿಗೆ ವಿದ್ಯಾಸಿರಿ ಊಟ ಮತ್ತು ವಸತಿ ಸಹಾಯ ಕಾರ್ಯಕ್ರಮದಡಿ ಸಹಾಯಧನ ಒದಗಿಸಲಾಗುತ್ತಿರುತ್ತದೆ. |

ಸಂಖ್ಯೆ: ಹಿಂವಕ 378 ಬಿಎಂಎಸ್ 2025

(ಶಿವರಾಜ.ಎಸ್.ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1532 ಕ್ಕೆ ಅನುಬಂಧ-1**

(ರೂ.ಕೋಟಿಗಳಲ್ಲಿ)

| ಯೋಜನೆಯ ಹೆಸರು | 2020-21 | | 2021-22 | | 2022-23 | | 2023-24 | | 2024-25 | |
|---|---|---|---|---|---|---|---|---|---|---|
| | ಪಾವತಿ ಯಾದ ಅರ್ಜಿಗಳ ಸಂಖ್ಯೆ | ಪಾವತಿ ಯಾದ ಮೊತ್ತ | ಪಾವತಿ ಯಾದ ಅರ್ಜಿಗಳ ಸಂಖ್ಯೆ | ಪಾವತಿಯಾದ ಮೊತ್ತ | ಪಾವತಿ ಯಾದ ಅರ್ಜಿಗಳ ಸಂಖ್ಯೆ | ಪಾವತಿ ಯಾದ ಮೊತ್ತ | ಪಾವತಿ ಯಾದ ಅರ್ಜಿಗಳ ಸಂಖ್ಯೆ | ಪಾವತಿ ಯಾದ ಮೊತ್ತ | ಪಾವತಿ ಯಾದ ಅರ್ಜಿಗಳ ಸಂಖ್ಯೆ | ಪಾವತಿ ಯಾದ ಮೊತ್ತ |
| ಕೇಂದ್ರ ಪುರಸ್ಕೃತ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ | 0 | 0.00 | 0 | 0.00 | 311736 | 74.08 | 293770 | 256.55 | 84578 | 79.280 |
| ಅಲೆಮಾರಿ/ಅರೆ ಅಲೆಮಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ | 0 | 0.00 | 23199 | 8.44 | 15898 | 5.74 | 14120 | 12.19 | 5068 | 4.430 |
| ಶುಲ್ಕ ಮರುಪಾವತಿ | 789876 | 520.39 | 887812 | 617.21 | 801732 | 562.11 | 361375 | 271.44 | 144882 | 86.580 |
| ವಿದ್ಯಾಸಿರಿ | 0 | 0.00 | 35740 | 34.80 | 52308 | 51.32 | 39332 | 58.99 | 32792 | 49.180 |

**ಟಿಪ್ಪಣಿ** : 2024-25 ನೇ ಸಾಲಿನ ಪಾವತಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1532 ಕ್ಕೆ ಅನುಬಂಧ-2

| ಜಿಲ್ಲೆ ಯ ಹೆಸರು | 2021-22 | | | 2022-23 | | | 2023-24 | | | 2024-25 | | |
|---|---|---|---|---|---|---|---|---|---|---|---|---|
| | ಸ್ವೀಕೃತವಾದ ಅರ್ಜಿಗಳು | ಅರ್ಹ ಅರ್ಜಿಗಳ ಸಂಖ್ಯೆ | ಅನರ್ಹ ಅರ್ಜಿಗಳ ಸಂಖ್ಯೆ | ಸ್ವೀಕೃತವಾದ ಅರ್ಜಿಗಳು | ಅರ್ಹ ಅರ್ಜಿಗಳ ಸಂಖ್ಯೆ | ಅನರ್ಹ ಅರ್ಜಿಗಳ ಸಂಖ್ಯೆ | ಸ್ವೀಕೃತವಾದ ಅರ್ಜಿಗಳು | ಅರ್ಹ ಅರ್ಜಿಗಳ ಸಂಖ್ಯೆ | ಅನರ್ಹ ಅರ್ಜಿಗಳ ಸಂಖ್ಯೆ | ಸ್ವೀಕೃತವಾದ ಅರ್ಜಿಗಳು | ಅರ್ಹ ಅರ್ಜಿಗಳ ಸಂಖ್ಯೆ | ಅನರ್ಹ ಅರ್ಜಿಗಳ ಸಂಖ್ಯೆ |
| ಬಾಗಲಕೋಟೆ | 47368 | 46762 | 606 | 43399 | 42181 | 1218 | 39633 | 37970 | 1963 | 42023 | 31143 | 10880 |
| ಬಳ್ಳಾರಿ | 39045 | 38763 | 282 | 17812 | 15639 | 2173 | 14313 | 12845 | 3333 | 15805 | 11605 | 4200 |
| ಬೆಳಗಾವಿ | 93724 | 92878 | 846 | 87729 | 83317 | 4412 | 80981 | 76289 | 5889 | 83724 | 58358 | 25366 |
| ಬೆಂಗಳೂರು ಗ್ರಾಮಾಂತರ | 11051 | 10981 | 70 | 10798 | 9520 | 1278 | 8802 | 7635 | 1262 | 9183 | 7223 | 1960 |
| ಬೆಂಗಳೂರು ನಗರ | 113964 | 112297 | 1667 | 120902 | 104197 | 16705 | 95047 | 80502 | 16085 | 104467 | 73454 | 31013 |
| ಬೀದರ್ | 20553 | 19997 | 556 | 20168 | 17868 | 2300 | 14833 | 13377 | 1834 | 15385 | 11526 | 3859 |
| ಚಾಮರಾಜನಗರ | 10746 | 10707 | 39 | 9210 | 9071 | 139 | 7452 | 7394 | 138 | 8089 | 6115 | 1974 |
| ಚಿಕ್ಕ ಬಳ್ಳಾಪುರ | 15450 | 15278 | 172 | 13369 | 12913 | 456 | 10898 | 10095 | 1035 | 10553 | 8138 | 2415 |
| ಚಿಕ್ಕಮಗಳೂರು | 13872 | 13692 | 180 | 12094 | 11752 | 342 | 8421 | 7856 | 869 | 7968 | 6020 | 1948 |
| ಚಿತ್ರದುರ್ಗ | 20130 | 20009 | 121 | 19988 | 18672 | 1316 | 14309 | 13418 | 1006 | 13836 | 10384 | 3452 |
| ದಕ್ಷಿಣ ಕನ್ನಡ | 35231 | 34850 | 381 | 31203 | 26169 | 5034 | 23479 | 18982 | 4796 | 25137 | 19739 | 5398 |
| ದಾವಣಗೆರೆ | 31362 | 31159 | 203 | 30538 | 28145 | 2393 | 24293 | 22171 | 2447 | 25696 | 18682 | 7014 |
| ಧಾರವಾಡ | 43539 | 42846 | 693 | 42152 | 39934 | 2218 | 34839 | 32638 | 2668 | 39112 | 28401 | 10711 |
| ಗದಗ | 23190 | 23062 | 128 | 21874 | 20537 | 1337 | 18688 | 17282 | 1577 | 18454 | 13217 | 5237 |
| ಹಾಸನ | 36614 | 36474 | 140 | 34661 | 33355 | 1306 | 25524 | 23829 | 2004 | 24716 | 18963 | 5753 |
| ಹಾವೇರಿ | 26672 | 26524 | 148 | 23907 | 23403 | 504 | 18049 | 17363 | 836 | 18079 | 13050 | 5029 |
| ಕಲಬುರ್ಗಿ | 44005 | 43710 | 295 | 40528 | 36839 | 3689 | 32342 | 29409 | 3364 | 31578 | 22322 | 9256 |
| ಕೊಡಗು | 5460 | 5360 | 100 | 4397 | 4168 | 229 | 3429 | 3157 | 284 | 3832 | 2808 | 1024 |
| ಕೋಲಾರ | 14603 | 14485 | 118 | 12149 | 11616 | 533 | 10289 | 9800 | 1773 | 9549 | 7774 | 1775 |
| ಕೊಪ್ಪಳ | 23502 | 23350 | 152 | 21455 | 20696 | 759 | 17454 | 17191 | 422 | 18422 | 13130 | 5292 |
| ಮಂಡ್ಯ | 36732 | 36626 | 106 | 35352 | 32735 | 2617 | 28528 | 24950 | 3691 | 26240 | 16958 | 9282 |
| ಮೈಸೂರು | 62552 | 62183 | 369 | 66169 | 64100 | 2069 | 54001 | 49240 | 3718 | 61174 | 36642 | 24532 |
| ರಾಯಚೂರು | 25429 | 25275 | 154 | 22106 | 21278 | 828 | 17643 | 17097 | 697 | 19656 | 10469 | 9187 |
| ರಾಮನಗರ | 15420 | 15360 | 60 | 13790 | 13171 | 619 | 11296 | 10535 | 1076 | 12099 | 7711 | 4388 |
| ಶಿವಮೊಗ್ಗ | 36554 | 36188 | 366 | 34048 | 32899 | 1149 | 26155 | 24967 | 2080 | 26545 | 20684 | 5861 |
| ತುಮಕೂರು | 47169 | 46706 | 463 | 42852 | 41147 | 1705 | 35897 | 32626 | 6655 | 33286 | 25914 | 7372 |
| ಉಡುಪಿ | 22514 | 22272 | 242 | 19181 | 18211 | 970 | 15445 | 13918 | 1656 | 15126 | 12459 | 2667 |
| ಉತ್ತರ ಕನ್ನಡ | 25270 | 25092 | 178 | 21223 | 20781 | 442 | 17312 | 16592 | 861 | 17963 | 14445 | 3518 |
| ವಿಜಯನಗರ | 0 | 0 | 0 | 15994 | 15404 | 590 | 13202 | 12834 | 501 | 12473 | 9114 | 3359 |
| ವಿಜಯಪುರ | 40837 | 40636 | 201 | 35268 | 33514 | 1754 | 32798 | 30569 | 2732 | 33710 | 26998 | 6712 |
| ಯಾದಗಿರಿ | 13999 | 13751 | 248 | 12491 | 11943 | 548 | 9615 | 9430 | 375 | 11529 | 6037 | 5492 |
| **ಒಟ್ಟು** | **996557** | **987273** | **9284** | **936807** | **875175** | **61632** | **764967** | **701961** | **77627** | **795409** | **569483** | **225926** |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು